ಎನ್‌. ಸಂಧ್ಯಾರಾಣಿ

ಕಲೆ: ರೂಪಶ್ರೀ ಕಲ್ಲಿಗನೂರ್

# ಬಂದಾನೇನ... ಎದುರು ನಿಂದಾನೇನಾ...

**ಯಾವುದಾದರೂ ಸಂಬಂಧ ತೀರಾ ಹತ್ತಿರವಾಗಿಬಿಟ್ಟರೆ ನನಗೆ ಹೆದರಿಕೆ ಶುರುವಾಗುತ್ತದೆ. ಯಾವುದೇ ಸಂಬಂಧದಲ್ಲಿ ಪೂರ್ಣವಾಗಿ ಮುಳುಗುವುದರ ಬಗ್ಗೆ ನನಗೊಂದು ಫೋಬಿಯಾ ಇದೆ...**

'ನನಗೆ ಬಾಯ್ ಎಂದು ಹೇಳುವುದು ಹಿಡಿಸುವುದಿಲ್ಲ' ಎಂದು ಹೇಳಿದ್ದು ಒಂದೇ ಸಲ, ಈ ಹತ್ತು ವರ್ಷಗಳಲ್ಲಿ ಮತ್ತೆಂದೂ ಅವನು 'ಬಾಯ್' ಅಂದಿಲ್ಲ, ಪ್ರತಿ ಭೇಟಿಯ ಕಡೆಯ ಕ್ಷಣದಲ್ಲೂ ಹಣೆಗೆ ಮುತ್ತಿಟ್ಟು 'ಟೇಕ್ ಕೇರ್, ಬೇಗ ಸಿಗೋಣ ನಿಲಾ' ಎಂದೇ ಹೇಳುತ್ತಾನೆ. ಸರೋವರದಂಥವನು, ಮೇರೆ ಮೀರದೆಯೇ ಆವರಿಸಿಕೊಳ್ಳುತ್ತಾನೆ. ಹಿಂದಣ ಅನಂತವನ್ನು, ಮುಂದಣ ಅನಂತವನ್ನು ಒಳಗೊಂಡ, ಆದರೆ ಅವೆರಡನ್ನೂ ಹಿಡಿದಿಡದ ಒಂದು ಬಿಂದುವಿನಲ್ಲಿ ಸಂಧಿಸಿದವನು. ಯಾರು ಆ ಸಾಲುಗಳನ್ನು ಬರೆದವರು? 'ಜಗದ ಜಾಣರು ಬರೆಯುವ ಪತ್ರಗಳೆಲ್ಲಾ ಹೆಸರಿರುವ ವಿಳಾಸಕ್ಕೆ, ಅನಾಮಿಕ ಮೌನದ ಊರು ಸಂಭವಿಸಿದ್ದು ಮಾತ್ರ ನಿನ್ನ ಕೈಬೆರಳು ಸೋಕಿದಾಗ.' ಆ ಊರಿನಲ್ಲಿ ಇದ್ದದ್ದು ನಾವಿಬ್ಬರು ಮಾತ್ರ, ಅವನಿಂದ ಶುರುವಾಗಿ ನನ್ನಲ್ಲಿ ಕೊನೆಯಾಗುವ ಸೀಮೆಯ ಆವರಣದಲ್ಲಿ ಇದರ ಇರುವಿಕೆ. ಆ ಜಗದ ಹೊರತಾಗಿ ಅವನ ಜಗತ್ತಿನಲ್ಲಿ ನನಗೂ, ನನ್ನ ಜಗತ್ತಿನಲ್ಲಿ ಅವನಿಗೂ ಪ್ರವೇಶವಿಲ್ಲ. ಹಾಗೊಂದು ವೇಳೆ ಆ ಗಡಿದಾಟಿದರೆ ನಮ್ಮ ಊರು ಮಾಯವಾಗಿಬಿಡುವ ಶಾಪವಿದೆ.

'That was magical...' ಅವನೊಂದಿಗೆ ಮೊದಲ ಮಾತನಾಡಿದಾಗ ನನ್ನ ಕಣ್ಣುಗಳ ಹಸಿ ಇನ್ನೂ ಆರಿರಲಿಲ್ಲ. ಸ್ಟೇಜ್ ಮೇಲೆ ಇನ್ನೂ ಏನೋ ಕಾರ್ಯಕ್ರಮ ನಡೆಯುತ್ತಿತ್ತು, ಅವನ ತಬಲಾ ಕಾರ್ಯಕ್ರಮ ಆಗಷ್ಟೇ ಮುಗಿದಿತ್ತು. ಕಾಯಲಾರದೆ ಎದ್ದು ಬ್ಯಾಕ್‌ಸ್ಟೇಜ್‌ಗೆ ಹೋಗಿದ್ದೆ, ಚಾಚಿದ್ದ ನನ್ನ ಕೈಯಲ್ಲಿ ಕೈಯಿಟ್ಟವನ ಕಣ್ಣೆಲ್ಲಾ ಕಂಬನಿಯಲ್ಲಿ ಹೊಳೆಯುತ್ತಿದ್ದ ನನ್ನ ಕಣ್ಣೆವೆಗಳಲ್ಲಿ